ಎರಡನೆಯದಾಗಿ ಶ್ರೀಮಾನ್ ಕಾಗೋಡುತಿಮ್ಮಪ್ಪನವರು ಅವರಿಗೆ ಪರಿಹಾರದ ವಿಷಯವಾಗಿ ಹೇಳಿದ್ದಾರೆ. ಅವರು ಸರಕಾರದ ಪಟ್ಟಿ ತೆಗೆದುಕೊಂಡಿದ್ದು ಆ ಜಮೀನನ್ನು ಅವರದೇ ಎಂದು ಸಾಬೀತು ಮಾಡಿಕೊಟ್ಟರೆ ಅವರಿಗೆ ಅವಶ್ಯವಾಗಿ ಪರಿಹಾರ ಕೊಡುವದಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹಿಂದು ಮುಂದು ನೋಡುವುದಿಲ್ಲ ಎಂದು ಹೇಳುತ್ತೇನೆ.

(iii) re : Acute scarcity of Kerosene and Diesel oil in Tiptur Taluk.

Sri T. M. MANJUNATH (Tiptur).—I call the attention of the Minister of State for Food and Civil Supplies to the acute scarcity of kerosene and diesel oil in Tiptur Taluk.

Smt. E. E. VAZ (Minister for Food and Civil Supplies).—Sir, I make the following Statement:

Reports are being received of shortage of Kerosene and Diesel Oil from all parts of the State now and then. The State receives its supplies from the two refineries at Madras and Cochin and storage points in Goa and Guntakal fed by Bombay and Vizag refineries respectively. Some times, supplies are badly affected due to snags developing in the working of the refineries etc., and transport bottlenecks.

Shortage of Kerosene and Diesel Oil is country-wide phenomena and not peculiar to the Mysore State alone. However, close contacts are being maintained with the local representatives of the supplying firms with a view to ènsure equitable distribution of the available supplies and to meet all our demands to the extent possible. All the enforcement authorities have been requested to enforce the control orders effectively and to book the offenders.

The following quantities of High Speed Diesel Oil and Kerosene Oil were reported to have been received in Tiptur Taluk during the month of April 1973.

i) High Speed Diesel Oil	75,400 litres
ii) Kerosene Oil	74,900 litres

The Deputy Commissioner, Tumkur, has reported that the quantities of High Speed Diesel and Kerosene Oil received in April 1973 in Tiptur Taluk was adequate for the normal requirements of the public and that, the Tahsildar has been instructed suitably to see that stocks are properly distributed.

ಶ್ರೀ ಟಿ. ಎಂ. ಮಂಜುನಾಥ್.—ಈ ವಿಚಾರದಲ್ಲಿ ನಾನು ಕೇಳುವುದು ಏನೆಂದರೆ ಮೊದಲನೆಯದಾಗಿ ಮದ್ರಾಸ ಮತ್ತು ಕೊಚಿನ ರಿಫೈನರೀಸ್‌ಗೂ ಮತ್ತು ಇಂಡಿಯನ್ ಆಯಿಲ್ ಕಂಪನಿಗೂ ಏನಾದರೂ ಸಂಬಂಧ ಇದೆಯೇ ?

ಎರಡನೆಯದಾಗಿ ಬೇರೆ ಕಡೆಗಳಲ್ಲಿ ಇಂಡಿಯನ್ ಆಯಿಲ್ ಕಂಪನಿಯವರು ನಿಗದಿ ಮಾಡಿರತಕ್ಕಂಥ ಧಾರಣೆಗಿಂತ ಹೆಚ್ಚು ಧಾರಣೆಗೆ ಮಾರುವುದಕ್ಕೆ ಕಾರಣ ಏನು ? ಆದರೆ ನಮ್ಮ ನಮ್ಮ ತಾಲೂಕಿನಲ್ಲಿರುವ ಇಂಡಿಯನ್ ಆಯಿಲ್ ಕಂಪನಿ ಏಜೆನ್ಸೀಸ್ ಏನು ಇದ್ದಾರೆ ಅವರು ಸರಿಯಾಗೇ ಕೊಡುತ್ತಿದ್ದಾರೆ, ಅವರು ಬಹಳ ಪ್ರಾಮ್ಟ್ ಆಗಿ ಮಾರುತ್ತಿದ್ದಾರೆ. ಆದರೆ ಬೇರೆ ಕಡೆಯಲ್ಲಿ ಬೇರೆ ರೇಟಿನಲ್ಲಿ ಮಾರುತ್ತಿದ್ದಾರೆ ಎಂದು ನಾನು ಕೇಳಿದ್ದೀನೆ. ಮತ್ತು ನಾನೇ ಒಂದು ತಾಲೂಕಿಗೆ ಹೋಗಿದ್ದಾಗ ನೋಡಿದೆ, ಹಳ್ಳಿಯಲ್ಲಿರುವ ಎಷ್ಟೋ ಜನಗಳಿಗೆ ದೀಪ ಇಲ್ಲದೆ ಪಟ್ಟಣಗಳಿಗೆ ಬಂದು ಶೀಮೆಯೆಣ್ಣೆ ತೆಗೆದುಕೊಂಡು ಹೋಗಲು ಡಬ್ಬ ಮತ್ತು ಶೀಶೆಗಳನ್ನು ತಂದರೆ ಶೀಮೆಯೆಣ್ಣೆ ಸಿಗದೆ ವಾಪಸ್ಸು ತೆಗೆದುಕೊಂಡು ಹೋಗುತ್ತಿದ್ದರು. ಮತ್ತು ಎಷ್ಟೋ ಬಾವಿಗಳಲ್ಲಿ ನೀರು ಕಡಿಮೆಯಾಗಿರುವದರಿಂದ ಪಂಪು ಸೆಟ್ಟುಗಳಿಗೆ ಡೀಸಲ್ ಉಪಯೋಗಿಸಬೇಕಾಗಿರುವದರಿಂದ ಅವರಿಗೆ ಡೀಸಲ್ ಸರಿಯಾಗಿ ಸಿಕ್ಕುತ್ತಾ ಇಲ್ಲ. ಈ ರೀತಿ ತೊಂದರೆ ಇರುವದರಿಂದ ಮುಂದೆ ನಮ್ಮ ತಾಲ್ಲೂಕಿಗೆ ಎಷ್ಟು ಬೇಕೋ ಅಷ್ಟನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ.— ನಮಗೆ ಜಾಸ್ತಿ ಬಂದರೆ ಜಾಸ್ತಿ ಕೊಡಲಿಕ್ಕೆ ಏರ್ಪಾಡು ಮಾಡುತ್ತೇನೆ.

ಎರಡನೆಯದಾಗಿ ಈ ರೀಫೈನರೀಸಯಿಂದ ಬರುವುದು ಸೆಂಟ್ರಲ್ ಗೌರ್ವನಮೆಂಟ್ ಅವರು ಸ್ಟೇಟಿಗೆ ಎಷ್ಟು ಅಲಾಟ್ ಮಾಡುತ್ತಾರೋ ಅಷ್ಟು ಬರುತ್ತದೆ. ನಮಗೂ ಅವರಿಗೂ ಸಂಬಂಧವಿಲ್ಲ.

iv) re : Smuggling of Jowar to Maharashtra from Gulbarga and Yadgir.

Sri MALLIKARJUN KHARGE.— (Gurmitkal) I call the attention of the Minister of State for Food and Civil Supplies to the smuggling of Jowar to Maharashtra from Gulbarga and Yadgir.